ಆ ರೀತಿ ಆಗದಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಇನ್ನು ಮೇಲೆ ಕೆಲಸವನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ನಿಗಾವನ್ನು ಕೊಟ್ಟು ನಾವು ನೋಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ಆಗತಕ್ಕಂಥ ಕೆಲಸದ ಬಗ್ಗೆ ಮಾನ್ಯ ಸದಸ್ಯರು ಯಾವ ರೀತಿ ಹೇಗೆ ಎನ್ನತಕ್ಕಂಥ ಅಭಿಪ್ರಾಯವನ್ನು ಕೊಟ್ಟರೆ ನಾವು ಹೆಚ್ಚಿನ ನಿಗಾವನ್ನು ಕೊಟ್ಟು ಅದರ ಬಗ್ಗೆ ಕೆಲಸವನ್ನು ಮಾಡಿಸುವುದಕ್ಕೆ ನಾನು ಆದೇಶವನ್ನು ಕೊಡುತ್ತೇನೆ.

ವಿಷಯ :– ಕೋಲಾರ ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 9 (155)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಎಷ್ಟು ಕಿ. ಮೀ. ರಸ್ತೆಗಳು ಬರುತ್ತದೆ ?

ಆ) ಅದರಲ್ಲಿ ಬಂಗಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಕಿ. ಮೀ. ರಸ್ತೆಗಳು ಜಿಲ್ಲಾ ಪರಿಷತ್‌ನ ವ್ಯಾಪ್ತಿಗೆ ಬರುತ್ತದೆ ?

ಇ) ಈ ರಸ್ತೆಗಳು ಶಿಥಿಲಗೊಂಡಿದ್ದು ಇವುಗಳನ್ನು ದುರಸ್ತಿಪಡಿಸಲು ಅಥವಾ ಮೇಲ್ದರ್ಜೆಗೇರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ?

ಈ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಇದಕ್ಕಾಗಿ ಹೆಚ್ಚುವಾಗಿರುವ ಹಣವೆಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) 2807.70 ಕಿ. ಮೀ.ಗಳು.

ಆ) 252.40 ಕಿ. ಮೀ. ಗಳು.

ಇ) ಸದರಿ ರಸ್ತೆಗಳನ್ನು ಲಭ್ಯವಿರುವ ಜಿಲ್ಲಾ ಪರಿಷತ್ ಅನುದಾನದಲ್ಲಿ ನಿರ್ವಹಣೆ ಮಾಡುತ್ತಿದ್ದು 30.80 ಕಿ. ಮೀ. ಉದ್ದದ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಜಿಲ್ಲಾ ಪರಿಷತ್‌ಗೆ ಸದರಿ ರಸ್ತೆಗಳನ್ನು 1987-88 ನೇ ಸಾಲಿನಲ್ಲಿ ವಹಿಸಲಾಗಿದ್ದು, ಇಲ್ಲಿಯವರೆಗೆ 22.62 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಶ್ರೀ ಎಂ. ನಾರಾಯಣಸ್ವಾಮಿ :– ಮಾನ್ಯ ಸಭಾಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ ಕೋಲಾರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಎಷ್ಟು ಕಿಲೋ ಮೀಟರ್ ರಸ್ತೆಗಳು ಬರುತ್ತವೆ ? ಇದಕ್ಕೆ ಉತ್ತರವಾಗಿ 2807.70 ಕಿಲೋ ಮೀಟರ್‌ಗಳು ಬರುತ್ತದೆ ಎಂದು ಹೇಳಿದ್ದಾರೆ. ನಾನು ಇದರಲ್ಲಿ ನನ್ನ ಕ್ಷೇತ್ರವಾದ ಬಂಗಾರುಪೇಟೆ ತಾಲ್ಲೂಕಿನಲ್ಲಿ ಎಷ್ಟು ಕಿಲೋಮೀಟರ್ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ ಎಂದಿದ್ದಕ್ಕೆ ಉತ್ತರವಾಗಿ 252.40 ಕಿಲೋ ಮೀಟರ್‌ಗಳು ಬರುತ್ತದೆ ಎಂದು ಹೇಳಿದ್ದಾರೆ. ಆದರೆ ನಾನು ಮೂರನೆಯ ಪ್ರಶ್ನೆಯನ್ನು ಕೇಳಿದ್ದರಲ್ಲಿ "ಈ ರಸ್ತೆಗಳು ಶಿಥಿಲಗೊಂಡಿದ್ದು ಇವುಗಳನ್ನು ದುರಸ್ತಿ ಪಡಿಸಲು ಅಥವಾ ಮೇಲ್ದರ್ಜೆಗೇರಿಸಲು ಕ್ರಮಗಳನ್ನು ಕೈಕೊಳ್ಳಲಾಗಿದೆಯೇ ?" ಎಂದಿದ್ದಕ್ಕೆ ಉತ್ತರವಾಗಿ ಸದರಿ ರಸ್ತೆಗಳನ್ನು ಲಭ್ಯವಿರುವ ಜಿಲ್ಲಾ ಪರಿಷತ್ ಅನುದಾನದಲ್ಲಿ ನಿರ್ವಹಣೆ ಮಾಡುತ್ತಿದ್ದು, 30.80 ಕಿಲೋ ಮೀಟರ್ ಉದ್ದದ ರಸ್ತೆಗಳನ್ನು ಜಿಲ್ಲಾ ಮುಖ್ಯರಸ್ತೆಯಾಗಿ ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದರೆ 252.40 ಕಿಲೋ ಮೀಟರ್‌ನ್ನು ಯಾವಾಗ ದುರಸ್ತಿ ಮಾಡುತ್ತೀರಿ ಎಂದು ಕೇಳಿದಕ್ಕೆ ಬರೀ 30.80 ಕಿಲೋ ಮೀಟರ್ ಮಟ್ಟಿಗೆ ದುರಸ್ತಿಯನ್ನು ಅಥವಾ ಮೇಲ್ದರ್ಜೆಗೇರಿಸುತ್ತೇವೆ ಎಂದು ಹೇಳಿದಾರೆ. ಮಿಕ್ಕಿದ್ದನ್ನು ಯಾವಾಗ ಮಾಡುತ್ತೀರಿ. ಇದರ ಬಗ್ಗೆ ಏನು ದುರಸ್ತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದು ಒಂದು. ಎರಡನೆಯದೆಂದರೆ ಹಾಗಿದ್ದಲ್ಲಿ ಇಲ್ಲಿಯವರೆಗೂ ಆದಕ್ಕಾಗಿ ಹೆಚ್ಚಾಗಿರುವ ಹಣ ಎಷ್ಟು ಎಂದು ಹೇಳಿದರೆ 252.40 ಕಿಲೋ ಮೀಟರ್ 87–88, 88–89, 89–90, 90–91 ರ ಸಾಲಿಗೆ ಬರೀ ಕೇವಲ 22.62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವನ್ನು ಪೂರ್ಣಗೊಳಿಸಿ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ರಸ್ತೆಗಳು ಬೇರೆ ಕಡೆಯಲ್ಲಿ ಹಾಳಾದ ಹಾಗೆ ಅಲ್ಲಿಯೂ ಕೂಡಾ ಹೆಚ್ಚಾಗಿ ಹಾಳಾಗಿದೆ ಎನ್ನತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಕೋಲಾರದಲ್ಲಿ ಕೆಲವು ಕಡೆ ಮಳೆ ಬಾರದೇ ಇದ್ದಂಥ ಸಂದರ್ಭದಲ್ಲಿ

ಒಂದೊಂದು ಸಾರಿ ಮಳೆ ಜಾಸ್ತಿಯಾಗಿ ಬಿದ್ದು ರಸ್ತೆಗಳು ಹಾಳಾಗುವುದಕ್ಕೂ ಕೂಡಾ ಕಾರಣವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಬಹಳ ವರ್ಷಗಳಿಂದ ರಿಪೇರಿಯಾಗದೆ ಉಳಿದಿರತಕ್ಕಂಥ ವಿಚಾರವನ್ನು ನಾನು ಒಪ್ಪುತ್ತೇನೆ ಇದರಲ್ಲಿ ಒಂದೇ ಒಂದು ವಿಚಾರ ಎಂದರೆ ಹಣವನ್ನು ಜಾಸ್ತಿಯಾಗಿ ಕೊಟ್ಟು ಕೆಲಸವನ್ನು ಮಾಡಿಸಬೇಕು ಎನ್ನತಕ್ಕಂಥದ್ದು ಈಗ ಜಿಲ್ಲಾಪರಿಷತ್ ವ್ಯಾಪ್ತಿಗೆ ಬರತಕ್ಕಂಥ ಉದ್ದ ಕಿಲೋ ಮೀಟರ್ ಎಷ್ಟು ಎಂದು ನಾನು ಹೇಳಿದ್ದೇನೆ. ಇದು ಬಹಳ ಕಡಿಮೆ ಎನ್ನುವ ಮಾತನ್ನು ಒಪ್ಪುತ್ತೇನೆ. ಏಕೆಂದರೆ ಜಿಲ್ಲಾ ಪರಿಷತ್‌ಗೆ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ. ಜಿಲ್ಲಾ ಪರಿಷತ್‌ನವರು ಕೂಡ ಹೆಚ್ಚಿನ ಹಣವನ್ನು ಕೊಟ್ಟು ಕೆಲಸವನ್ನು ಮಾಡಿಸಬೇಕಾಗಿತ್ತು. ಜಿಲ್ಲಾ ಪರಿಷತ್ತು ಕಾನೂನಿನಲ್ಲಿ ಏನು ವ್ಯವಸ್ಥೆ ಇದೆಲ್ಲಾ ಬರುತ್ತದೆ. ಇದರ ಮೇಲೆ ಜಿಲ್ಲಾ ಪರಿಷತ್ತಿಗೆ ಅಧಿಕಾರ ಉಳಿಯುತ್ತದೆಯೋ ಅಥವಾ ಸರಕಾರಕ್ಕೇ ಬರುತ್ತದೆಯೋ ಈ ಉದ್ದನೆಯ ರಸ್ತೆಗಳು ಎನ್ನುವುದನ್ನು ಅದನ್ನು ನೋಡೋಣ. ಇನ್‌ದಿ ಮೀನ್‌ವೈಲ್ ಕೆಲವು ರಸ್ತೆಗಳನ್ನು ಅಪ್‌ಗ್ರೇಡ್ ಮಾಡಬೇಕು ಎನ್ನುವ ವಿಚಾರ ಕೂಡಾ ಸರ್ಕಾರಕ್ಕೆ ಪ್ರಪೋಸಲ್ ಬಂದಿದೆ. ಇದನ್ನು ಪಿ. ಡಬ್ಲ್ಯೂಡಿ.. ಯವರಿಗೆ ಟೇಕ್‌ಓವರ್ ಮಾಡಬೇಕು ಎನ್ನತಕ್ಕಂಥ ವಿಚಾರ ಬಂದು ನಾವು ಆ ರೀತಿಯಾಗಿ ತೆಗೆದುಕೊಂಡರೆ ಇದನ್ನು ಸಿ. ಅಂಡ್ ಬಿ. ಯಲ್ಲಿ ಹೆಚ್ಚಿಗೆ ಹಣವನ್ನು ಕೊಡಿಸಿಕೊಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ :– ಏಕೆಂದರೆ ನನ್ನ ಎರಡು ತಾಲ್ಲೂಕುಗಳು ಇಂಟರ್‌ಸ್ಟೇಟ್‌ನಲ್ಲಿ ಬರುತ್ತವೆ. 151 ಕಿಲೋ ಮೀಟರ್ ಉದ್ದದ ಸುತ್ತಳತೆ ನಮ್ಮ ಪಕ್ಕದಲ್ಲೇ ಬರುತ್ತದೆ. ನಮ್ಮದು ಬಾರ್ಡರ್ ತಾಲ್ಲೂಕು ಆಗಿರುವುದರಿಂದ ಅತೀ ಶೀಘ್ರವಾಗಿ ಕೆಲಸ ಮಾಡಿಸಬೇಕಾಗಿದೆ. ಏಕೆಂದರೆ ಈ ರಸ್ತೆಗಳನ್ನು ರಿಪೇರಿ ಮಾಡಿಸಿ ಸುಮಾರು 20 ವರ್ಷಗಳಾಗಿದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ನಲ್ಲಿ ಕೆಲವು ಪ್ರೋಗ್ರಾಮ್‌ಗಳು ಇದೆ. ಇಂಟರ್‌ಸ್ಟೇಟ್‌ನಲ್ಲಿ ಕೆಲವು ಪ್ರೋಗ್ರಾಮ್ಸ್ ಇದೆ. ಅದರಲ್ಲಿಯೂ ಕೂಡಾ ನಮಗೆ ಹಣ ಸಿಗುತ್ತದೆ. ಆ ಹಣದಲ್ಲೂ ಕೂಡ ತಮಗೆ ಮಂಜೂರು ಮಾಡಿಸಿಕೊಡುತ್ತೇನೆ. ಆ ಹಣ ಮತ್ತು ರೆಗ್ಯುಲರ್ ಆಗಿ ಬರತಕ್ಕಂಥದ್ದು ಇದನ್ನು ಕೂಡ ಜಾಸ್ತಿ ಮಾಡಿಸಿ ಕೊಡುತ್ತೇನೆ.

ವಿಷಯ :– ಮೈಸೂರು ಕಾಗದ ಕಾರ್ಖಾನೆ ನಿಯಮಿತ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 20 (13)

ಶ್ರೀ ಸಿ. ಬೈರೇಗೌಡ (ಮೇಮಗಲ್) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಕಾಗದ ಕಾರ್ಖಾನೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಕೇಂದ್ರ ಸ್ಥಾನ?

ಆ) ಮೈಸೂರು ಕಾಗದ ಕಾರ್ಖಾನೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು 1987-88 1988-89, ಮತ್ತು 1989-90 ರಲ್ಲಿ ಪ್ರವಾಸ ಭತ್ಯೆ, ದಿನ ಭತ್ಯೆ, ಮನರಂಜನ ಭತ್ಯೆ, ಮತ್ತು ಇತರೆ ಸವಲತ್ತುಗಳ ಬಗ್ಗೆ ತೆಗೆದುಕೊಂಡಿರುವ ಮೊಬಲಗು.

ಇ) ಮೇಲ್ಕಂಡ ಅವಧಿಯಲ್ಲಿ ಮೈಸೂರು ಕಾಗದ ಕಾರ್ಖಾನೆಯಲ್ಲಿದ್ದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಹೆಸರು.

ಈ) ಮೇಲ್ಕಂಡ ಅವಧಿಯಲ್ಲಿ ಮೈಸೂರು ಕಾಗದ ಕಾರ್ಖಾನೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಭದ್ರಾವತಿ ಮತ್ತು ಬೆಂಗಳೂರಿನಲ್ಲಿ ತಂಗಿದ್ದ ದಿನಗಳು ಮತ್ತು ಬೆಂಗಳೂರಿನಲ್ಲಿ ತಂಗಿದ್ದ ದಿನಗಳಿಗೆ ತೆಗೆದುಕೊಂಡ ಪ್ರವಾಸ ಭತ್ಯೆ ಮತ್ತು ದಿನ ಭತ್ಯೆ ಮೊಬಲಗು.

ಉ) ಮೈಸೂರು ಕಾಗದ ಕಾರ್ಖಾನೆಯ ವಿವಿಧ ಕಛೇರಿಗಳನ್ನು ಬೆಂಗಳೂರಿನಿಂದ ಭದ್ರಾವತಿಗೆ ವರ್ಗಾಯಿಸಲು ಪರಿಣಿತ ಸಮಿತಿಯು ಶಿಫಾರಸ್ಸು ಮಾಡಿದ್ದು ನಿಜವೇ ? ಹಾಗಿದ್ದಲ್ಲಿ ಯಾವ ವಿಭಾಗಗಳನ್ನು ವರ್ಗಾಯಿಸಲು ಪ್ರಸ್ತಾಪಿಸಲಾಯಿತು.

ಊ) ಮೇಲ್ಕಂಡ ಅವಧಿಯಲ್ಲಿ ಬೆಂಗಳೂರಿನಲ್ಲಿರುವ ಮೈಸೂರು ಕಾಗದ ಕಾರ್ಖಾನೆಯ ಕಛೇರಿಗಳಿಗೆ ಪ್ರತಿ ವರ್ಷ ಭೇಟಿ ಮಾಡಿದ ಮೊಬಲಗು ಮತ್ತು ಮೇಲ್ಕಂಡ ಅವಧಿಯಲ್ಲಿ ಭದ್ರಾವತಿಯಿಂದ ಬೆಂಗಳೂರಿಗೆ ಹೋಗಿ ಬರಲು ಪ್ರವಾಸ ಭತ್ಯೆ, ದಿನ ಭತ್ಯೆ ಮತ್ತು ಪೆಟ್ರೋಲ್/ಡೀಸೆಲ್‌ಗಾಗಿ ವೆಚ್ಚ ಮಾಡಿದ ಮೊಬಲಗು ಭದ್ರಾವತಿ ಮತ್ತು ಬೆಂಗಳೂರುಗಳ ನಡುವೆ ಟೆಲಿಫೋನ್ ಮತ್ತು ಟೆಲೆಕ್ಸ್ ಸಂದೇಶಕ್ಕಾಗಿ ಪ್ರತಿವರ್ಷ ವೆಚ್ಚ ಮಾಡಿದ ಅಂದಾಜು ಮೊಬಲಗು.